RegNo M 1299 - 42nd Year - Sri 'Satyavadi' Mysore - 22-1-1958

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅ ಶೋ ಕಾ ಫಾ ರ್ಮ ಸಿ
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing
L. N. Press
Sivarampet, Mysore

ಸತ್ಯವಾದಿ

ಸಂಸ್ಥಾಪಕರು– ಅಂಬಳೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯರು [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1–8

ಒಂದು ಸಾವಿರ ಜನರು ಪಿ ಎಸ್ ಪಿ ಗೆ ರಾಜೀನಾಮೆ ಇತರರು

ಗ್ರಾಂಟ್ಸ್ ಸಮಿತಿ ಸದಸ್ಯರ ಭೇಟಿ

ಭಾರತ ಸರ್ಕಾರದ ವಿಶ್ವವಿದ್ಯಾನಿಲಯದ ಗ್ರಾಂಟ್ಸ್ ಸಮಿತಿಯ ಪರಿಶೀಲನಾ ಸಮಿತಿ ಸದಸ್ಯರಾದ ಡಾ|| ಆರ್ ಬಾಲಕೃಷ್ಣ, ಪ್ರೊ|| ಗಾಡ್ಗಿ, ಪ್ರೊ|| ಕಾಲಿಪ ಸಾದ್, ಪ್ರೊ|| ಬಿ ಎಸ್ ಪ್ರಸಾದ್, ಪ್ರೊ|| ಡಿ ಕೆ ಭೀಮಸೇನರಾವ್ ಡಾ|| ಭಟ್ಟಾಚಾರ್ಯರು ಇಂದು, ನಾಳೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿಕೊಡುವರು

ಸಿಡುಬು ರೋಗ

ಮೈಸೂರು ಜಿಲ್ಲೆಯಲ್ಲಿ ಜನವರಿ 1 ರಿಂದ 15 ರವರೆಗೆ ಕಾಲರಾ ಪ್ಲೇಗು ಉಪಟಳವಿಲ್ಲ ಸಿಡುಬು 34 ಜನರಿಗೆ ತಗಲಿ ಇಬ್ಬರು ಸತ್ತರು.

ಬಹುಮಾನ ವಿನಿಯೋಗ

ಮೈಸೂರುಪ್ರಾಂತ, ಭಾರತಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಬಹುಮಾನ ವಿನಿಯೋಗ ಸಮಾರಂಭ 27 ನೆ ತಾ|| ಸಾಯಂಕಾಲ 5 ಗಂಟೆಗೆ ಶ್ರೀ ಜಯಚಾವರಾಜೇಂದ್ರ ಸ್ಕೌಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ನಡೆಯುವುದು ಮೈಸೂರು ವಿಭಾಗದ ಉಪ ಶಿಕ್ಷಣಾಧಿಕಾರಿಯವರಾದ ಶ್ರೀ ಟಿ ವಾಸುದೇವಯ್ಯನವರು ಮುಖ್ಯಾಯ ಭಾಷಣ ಮಾಡುವರು ಮೈಸೂರಿನ ಉತ್ತರ ಬಿಲ್ಡಿ ಸ್ಕೌಟ್ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಸಂಜೀವಯ್ಯನವರು ಅಧ್ಯಕ್ಷತೆ ವಹಿಸುವರು

ನಾಳೆಯ ಪಂಚಾಂಗ

ಲಿ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ

23 ಜನವರಿ ಶಕಭಿಷ

ಬಲ್ಬುಗಳ ಕಳ್ಳತನ

ಕಳೆದ 12 ತಿಂಗಳುಗಳಿಂದ ರೈಲ್ವೆಯ ಗಾಡಿಗಳಿಂದ 118000 ಬಲ್ಬುಗಳು ಕದಿಯಲ್ಪಟ್ಟಿವೆಯೆಂದೂ, ಬೀಸಣಿಗೆಗಳು ಕಳೆದ ವರ್ಷಕ್ಕಿಂತ ಶೇಕಡ 40 ರಷ್ಟು ಕಡಿಮೆ ಕಳುವಾಗಿವೆಯೆಂದೂ ಪ್ರಕಟವಾಗಿದೆ

ಸಿಂಗ್ಪುರ ಸರ್ಕಾರದ ಕಷ್ಟ

ಸಿಂಗ್ಪುರ ಸರ್ಕಾರ ತನ್ನ ಮುಸ್ಲಿಂ ನ್ಯಾಯಾಸ್ಥಾನಕ್ಕೆ ಒಬ್ಬ ಅಧ್ಯಕ್ಷನನ್ನು ಸಿಕ್ಕದೆ ಪರದಾಡುತ್ತಿದೆ ಇಸ್ಲಾಂ ಕಾನೂನನ್ನು ಚೆನ್ನಾಗಿ ಬಲ್ಲವರಾರೂ ಅಲ್ಲಿಲ್ಲವೆಂದು ಹೇಳಲಾಗಿದೆ ಬೇರೆಯ ಮುಸ್ಲಿಂ ದೇಶದಿಂದ ಒಬ್ಬರನ್ನು ಆಮದು ಮಾಡಿಕೊಳ್ಳುವ ವಿಷಯ ಇನ್ನೂ ನಿರ್ಧಾರವಾಗಿಲ್ಲವೆಂದು ಪ್ರಕಟವಾಗಿದೆ

ನಮ್ಮ ಭಾರತ

ಬಸಾತ್ ಜಿಲ್ಲೆಯಲ್ಲಿ ಪ್ರತಿ ವರ್ಷ ಸರಾಸರಿ 350 ಮಂದಿ ಅಪಘಾತಗಳಿಂದ ಅಥವಾ ಖೂನಿಯಿಂದ ಮೃತರಾಗುವರೆಂದು ಅಧಿಕೃತ ಪ್ರಕಟಣೆ ತಿಳಿಸುತ್ತದೆ ಈ ಪೈಕಿ 130 ಮಂದಿ ಹೆಂಡ ಇಳಿಸುವಾಗ ಮರದಿಂದ ಬಿದ್ದು ಸಾಯುವರೆಂದೂ, ಅನೇಕರು ಸ್ವಲ್ಪ ಕೋಪಸಿಟ್ಟಿಗಾಗಿ ಖೂನಿ ಮಾಡಲ್ಪಡುವರೆಂದೂ, 130 ಮಂದಿ ಹುಲಿಗಳಿಗೆ ಆಹುತಿ ಆಗುವರೆಂದೂ ವಿವರಿಸಲಾಗಿದೆ.

ಹಕ್ಕುದಾರರಿಲ್ಲದ ಚಿನ್ನ

ಬೊಂಬಾಯಿನಿಂದ ಬಂದಿರುವ ವರದಿ ಪ್ರಕಾರ ದಾದಾ ಎಂಬ ಹೆಸರಿನ ಎಂಜಿನ್ ರೂಮಿನಲ್ಲಿ ಹಕ್ಕುದಾರರಿಲ್ಲದ ಹಗ್ಗದ ಚೀಲವನ್ನು ವಶಪಡಿಸಿಕೊಳ್ಳಲು ಅದರಲ್ಲಿ ರೂ. 12 ಸಾವಿರ ಬೆಲೆಯ ಭಂಗಾರ ಮುಚ್ಚಿಡಲಾಗಿತ್ತು.

ರೂ. 2 ಲಕ್ಷ ಮೌತ್ತದ ವಸ್ತು ಪತ್ತೆ

ಕಲ್ಕತ್ತಾದ ಚೈನಾ ಬಜಾರು ರಸ್ತೆಯಲ್ಲಿ ಸುಂಕದವರು ಒಂದು ದಿನವೆಲ್ಲ ಒಂದು ಅಂಗಡಿಯ ವೇಲೆ ಧಾಳಿ ನಡೆಸಿ ರೂ 2 ಲಕ್ಷ ಅಕ್ರಮ ಸಾಗಾಣಿಕೆ ವಸ್ತುಗಳನ್ನು ವಶಪಡಿಸಿಕೊಂಡರು

ಸುಲ್ತಾನರಾಗುವ ಬಯಕೆ

ಷೇಕ್ ಅಬ್ದುಲ್ಲಾರವರು ಅವರು ಬಿಡುಗಡೆ ಆದನಂತರ ನೂಡುತ್ತಿರುವ ಭಾಷಣ ನೋಡಿದರೆ ಅವರು ಕಾಶ್ಮೀರ ಸುಲ್ತಾನರಾಗಬೇಕೆಂಬ ಆಶೆಯುಳ್ಳವರಂತಿದೆ ಎಂದು ಸ್ಥಳೀಯ ಸಂಸ್ಥೆ ಮಂತ್ರಿ ಖಂಡರ್ ಮೊನ್ನೆ ಜನ್ಮುವಿನಲ್ಲಿ ತಿಳಿಸಿದರು.

ಸೀಸದಿಂದ ಚಿನ್ನ

ರಷ್ಯ ವಿಜ್ಞಾನಿಗಳು ಸೀಸದಿಂದ ಭಂಗಾರವನ್ನು ತಯಾರಿಸಲಿದ್ದಾರೆಂದು ಪ್ರಕಟವಾಗಿದೆ

ಭಾಷಣದ ದಾಖಲಾತಿ

ನಾಗ್ಪೂರ್‌ನಲ್ಲಿ ಸೇರಿದ್ದ ಕಾಂಗ್ರೆಸು ಅಧಿವೇಶನದಲ್ಲಿ ಭಾಷಣ ಮಾಡುವುದರಲ್ಲಿ ಪಂ|| ನೆಹರು ದಾಖಲಾತಿ ಮಾಡಿದ್ದಾರೆ ಶುಕ್ರವಾರ 10 ಗಂಟೆಗಳ ಕಾಲ 10 ಭಾಷಣ ಮಾಡಿದರು ಸ್ಟೀರಿಂಗು ಕಮಿಟಿಯಲ್ಲಿ ಅವರು ಮಾಡಿದ ಭಾಷಣ ಸೇರಿಲ್ಲ.

ಸೋಷಲಿಸ್ಟರ ಸಭೆ

ಬೆಂಗಳೂರು 20 — ಸೋಷಲಿಸ್ಟ್ ಪಾರ್ಟಿಯು ತಾ|| 26 ರಿಂದ ಪ್ರಾರಂಭಿಸಬೇಕೆಂದಿರುವ ಶಾಸನೋಲ್ಲಂಘನೆ ಚಳವಳಿಯನ್ನು ವಿವರಿಸಲು ಇಂದು ಸಾರ್ವಜನಿಕ ಸಭೆ ನಡೆಸಲಾಯಿತು.

ಅಹಮದಾಬಾದು 21 — ಬೊಂಬಾಯಿ ರಾಜ್ಯ ಪ್ರಜಾ ಸೋಷಲಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಕಾಕಾ ಸಾಹೇಬ ದೇಶಮುಖರವರು ಪ್ರಜಾ ಸೋಷಲಿಸ್ಟ್ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ಅರ್ಪಿಸಿದರು ಅವರೊಡನೆ ಒಂದು ಸಾವಿರಕ್ಕೆ ಮೇಲ್ಪಟ್ಟು ಪಿಎಸ್ಪಿ ಸದಸ್ಯರು ಪಕ್ಷಕ್ಕೆ ರಾಜೀನಾಮೆ ಕೊಟ್ಟು ಕಾಂಗ್ರೆಸಿಗೆ ಸೇರಿದರು ಪಿಎಸ್ಪಿಗೆ ಯಾವ ಕಾರ್ಯಕ್ರಮವು ಇಲ್ಲವೆಂದು ದೇಶಮುಖರು ತಿಳಿಸಿರುವರು ಅವರು ಇತ್ತೀರುವ ಹೇಳಿಕೆಯಲ್ಲಿ ಸಂಯುಕ್ತ ಮಹಾರಾಷ್ಟ್ರ ಸಮಿತಿ ಕನ್ಯಾನಿಷ್ಟರ ಪ್ರಭಾವಕ್ಕೆ ಸಿಲುಕಿದೆ ಸಂಯುಕ್ತ ಮಹಾರಾಷ್ಟ್ರ ಸಮಿತಿಯಿಂದ ಸಿಳ್ಳುವದಿಲ್ಲ ಕಾಂಗ್ರೆಸಿನಿಂದ ಸಿಗುವದು ಎಂದರು.

ಅನ್ನ ಸಮಸ್ಯೆ ಪರಿಹರಿಸಲು ಸೇನೆ

ಲಾಹೋರು 20— ಪಾಕಿಸ್ತಾನದ ಆಹಾರ ಸಮಸ್ಯೆಯನ್ನು ಕ್ಷಿಪ್ರದಲ್ಲಿ ಪರಿಹರಿಸುವದಕ್ಕಾಗಿ ಸೈನ್ಯವನ್ನು ಕರೆಯುಬೇಕೆಂದು ಪಾಕಿಸ್ತಾನ ಆಹಾರ ಮಂತ್ರಿ ಎಯ್ಯೂಬ್ ಜಾಫರುಖಾ ಸೂಚಿಸಿರುವರು.

ಮಹಾತ್ಮರ ಪತ್ರ ಪ್ರದರ್ಶನ

ನವದೆಹಲಿ 21— ಈ ವರ್ಷ ಮಹಾತ್ಮಾ ಗಾಂಧಿಯವರ ಮರಣ ವಾರ್ಷಿಕ ದಿನಾಚರಣೆ ಕಾಲಡಲ್ಲಿ, ಹಿಂದೆ ಅವರು ಜನರಿಗೆ ಒರೆದಿದ್ದ ಕಾಗದಗಳ ಪ್ರದರ್ಶನ ಏರ್ಪಡಿಸಲಾಗುವುದು

ಲಾಠಿ ಪ್ರಹಾರ

ಪಾಟ್ನಾದ ಆಂಗ್ಲೋ – ಆರೆಬಿಕ್ ಶಾಲೆಯಲ್ಲಿ ಸಂಸ್ಕೃತ ವಿಗ್ರಹ ಸ್ಥಾಪನೆಯ ಪ್ರಯತ್ನದ ಸಂದರ್ಭದಲ್ಲಿ ಪೋಲೀಸರು 2 ಸಹಸ್ರ ಜನರ ಗುಂಪಿನ ಮೇಲೆ ಲಾಠಿ ಪ್ರಹಾರ ಮಾಡಿದರು.

ಅಕ್ಬರ್ ತನಗೆ ಮಗ ಹುಟ್ಟಿದ್ದನ್ನು ತಿಳಿದ ವಿಚಿತ್ರ ರೀತಿ

ಮೊಗಲು ಚಕ್ರವರ್ತಿ ಅಕ್ಬರನಿಗೆ ಮಕ್ಕಳುಗಳು ಆಗಿ ಆಗಿ ಸತ್ತುಹೋಗುತ್ತಿದ್ದವು : ತನ್ನ ವಂಶಾಭಿವೃದ್ಧಿಗೂ, ರಾಜ್ಯಾಧಿಕಾರದ ಉತ್ತರಾಧಿಕಾರಿಯೂ ಇಲ್ಲವಲ್ಲವೆಂದು ತುಂಬಾ ಚಿಂತಾಕ್ರಾಂತನಾಗಿದ್ದನು ; ಅಕ್ಬರನಿಗೆ ಬಹು ಮಂದಿ ಪತ್ನಿಯರೂ, ನೂರು ಮಂದಿಗೆ ಹೆಚ್ಚು ಮಂದಿ ಉಪಪತ್ನಿಯರೂ ಇದ್ದರು , ಪತ್ನಿಯರಲ್ಲಿ ರಾಜಪುತ್ರಿಯಳಾಗಿದ್ದ ಮಾರಿಯಂ-ಉಜ್-ಜಮಾನ್ ಚಕ್ರವರ್ತಿಯ ಹೆಚ್ಚು ವಿಶ್ವಾಸ ಗಳಿಸಿದ್ದಳು

ಮೊಗಲ್ ಚಕ್ರವರ್ತಿಗಳ ವಂಶವನ್ನು ಮುಂದುವರಿಸುವ ರಾಜ್ಯಾಧಿಕಾರಿಯಾಗಲು ಮಗನೊಬ್ಬನಿಗಾಗಿ ಅಕ್ಬರು ಹಾತೊರೆಯುತ್ತಿದ್ದನು.

ಆ ಕಾಲದಲ್ಲಿ ಕಲ್ಲುಕಟ್ಟುಕಂ ಚಿಕ್ಕಗಾತ್ರದ ಸಿಕ್ರಿಯಲ್ಲಿ ಒಂದು ಗುಹೆಯಲ್ಲಿ ಒಬ್ಬ ವಿರಕ್ತನೂ ಸಾಧುವೂ ಆದ ಷೇಕ್ ಸಲೀಂ ಚಿಷ್ತಿ ಎಂಬ ಮಹಾನುಭಾವನಿದ್ದನು ; ಈತನು ಪರ್ಷಿಯಾದ ಪಾಕ್‌ಪಟ್ಟನ್ನಿನ ಪ್ರಖ್ಯಾತ ಷೇಕ್ ಫ್ಹೆಡೆ ಇ ಷಕರ್‌ಗಂಜ್‌ನ ವಂಶಸ್ಥನಾಗಿದ್ದನು : ಈತನ ತಂದೆಯು ಜೆಸ್ಟ್ಯಾಲಿನ ಪವಿತ್ರ ಪುರುಷನಾಗಿದ್ದರಿಂದ, ತಂದೆಯು ಗೌರವಾರ್ಥವಾಗಿ ಚಿಷ್ತಿ ಎಂದು ಹೆಸರಿಟ್ಟುಕೊಂಡಿದ್ದನು.

ಈ ಫಕೀರನ ದಯಾಪರ ಕಾರ್ಯಗಳೂ, ಅವನ ಸನ್ಮಾನಸತ್ವವೂ ಮತ್ತು ಆತನ ಕೌತುಕಶಕ್ತಿಯೂ ಅಕ್ಬರು ಚಕ್ರವರ್ತಿಯ ಕಿವಿಯ ತನಕ ಮುಟ್ಟಿದ್ದಿತು ; ಅಕ್ಬರನ ಉಜ್ಜೈನೀಕಿನ ದಂಗೆಗೋರ ಜನರ ಮೇಲಿನ ದಂಡಯಾತ್ರಾನಂತರ ವಾಪಸ್ಸು ಬರುವಾಗ ಸಿಕ್ರಿಯಲ್ಲಿ ಒಂದು ದಿನ ವಿಶ್ರಾಂತಿ ಮಾಡಿ ಆ ಸಾಧುವನ್ನು ಸಂದರ್ಶಿಸಿದನು ; ಈ ಭಾರಿ ಚಕ್ರವರ್ತಿಯು ಸಾಧುವಿನ ಪಾದಗಳ ಮೇಲೆ ಬಿದ್ದು ತನ್ನ ಆಶಯವನ್ನು ಅರಿಕೆ ಮಾಡಿ, ಒಬ್ಬ ಪುತ್ರನು ದೊರೆಯುವಂತೆ ಮಾಡಬೇಕೆಂದು ಅಂಗಲಾಚಿ ಬೇಡಿಕೊಂಡನು.

ಜಪಸರ ಎಣಿಸುತ್ತಿದ್ದ ಆ ಪವಿತ್ರಾತ್ಮನು ಸ್ವಲ್ಪ ಯೋಚಿಸಿ, ಉಜ್ಜೈನಿಯಲ್ಲಿರುವ ಮಸೀದಿಗೆ ಭೇಟಿ ಕೊಡುವಂತೆ ತಿಳಿಸಿದನು ; ತನ್ನ ಆಶೆ ಪರಿಪೂರ್ಣಗೊಳ್ಳಲೆಂಬ ಆತುರತೆಯಿಂದ ಅಕ್ಬರನು ಉಜ್ಜೈನಿಯನ್ನು ಒಂದು ತಿಂಗಳಲ್ಲಿ ತಲುಪಿದನು : ಮಸೀದಿಯ ಖಾಜಿಯನ್ನು ಕಂಡು, ತನ್ನ ಭೇಟಿಯ ಉದ್ದೇಶವನ್ನು ತಿಳಿಸಿದನು ; ಖಾಜಿಯು ತನ್ನ ಕೈಗಳನ್ನು ಮೇಲಕ್ಕೆತ್ತಿ ಚಕ್ರವರ್ತಿಯನ್ನು ಕುರಿತು, ನಿಮ್ಮ ಪರವಾಗಿ ಏನು ಮಾಡಲೂ ನನಗೆ ಶಕ್ತಿಯಿಲ್ಲ, ಆ ಫಕೀರನು ಎಲ್ಲವನ್ನೂ ಮಾಡುವನು, ಎಂದು ಹೇಳಿದನು.

ಅಕ್ಬರನು ಅಸಂತುಷ್ಟಗೊಂಡು, ಆ ಸ್ಥಳದಿಂದ ತೆರಳಿದನು ; ಫಕೀರ ಷೇಕ್ ಸಾಲೀಂ ಚಿಷ್ತಿಯು ವಿಷಯದಲ್ಲೂ ಸ್ವಲ್ಪ ಮನಸ್ಸಿನಲ್ಲಿ ತೊಳಲಾಡಿಕೊಂಡನು ; ಎರಡು ವಾರಗಳಲ್ಲಿ ಆಗ್ರಾಕ್ಕೆ ತಲುಪಿದನು ; ಅಲ್ಲಿ ಸ್ವಲ್ಪ ವಿಶ್ರಾಂತಿ ಪಡೆದ ನಂತರ ಮತ್ತೆ ಸಿಕ್ರಿಗೆ ಭೇಟಿ ಕೊಟ್ಟು, ಫಕೀರನನ್ನು ಸಂದರ್ಶಿಸಿದನು.

ಚಕ್ರವರ್ತಿಯು ಬಾಯಿತೆರೆಯುವದರೊಳಗಾಗಿ, ಕಣ್ಣು ಮುಚ್ಚಿ ಧ್ಯಾನ ಮಾಡುತ್ತಿದ್ದ ಸಾಧುವು, ಕಣ್ಣು ತೆರೆದು ' ಅಕ್ಬರ್, ! ನೀನು ಉಜ್ಜೈನಿಗೆ ಹೋಗಿದ್ದುದು ಗೊತ್ತಾಯಿತು ; ಖಾಜಿಯು ನಿನಗೆ ಎಲ್ಲ ವಿವರಿಸಿದ್ದಾನೆ : ನಿನ್ನೋಸ್ಕರ ನಾನು ಪ್ರಾರ್ಥನೆ ಮಾಡಲು ಒಪ್ಪಿದ್ದೇನೆ ; ನನ್ನ ಪ್ರಾರ್ಥನೆಯನ್ನು ಕೇಳಲಿ ' ಎಂದು ತಿಳಿಸಿದನು.

ಅವನ ದಯಾಪೂರಿತ ಮಾತುಗಳಿಂದ ಅಕ್ಬರನು ಆನಂದಭರಿತನಾದನು ; ಫಕೀರನು ಬರೀ ನೆಲದ ಮೇಲೆ ಮೊಣಕಾಲೂರಿ, ಮೌನವಾಗಿ ಪ್ರಾರ್ಥನೆ ಮಾಡತೊಡಗಲು, ಅವನ ದಯಾಪೂರಿತವಾದ ಮುಖವನ್ನೇ ಅಕ್ಬರನು ನೋಡುತ್ತಿದ್ದನು ; ಕೆಲ ನಿಮಿಷಗಳನಂತರ ಅತನು ಎದ್ದು, ಅಕ್ಬರನ ಮುಖವನ್ನು ನೋಡುತ್ತಾ ' ಅಕ್ಬರ್ ! ನೀನು ಹೋಗಬಹುದು, ನಿನಗೆ ಒಬ್ಬ ಮಗ ಹುಟ್ಟುತ್ತಾನೆ ' ಎಂದು ತಿಳಿಸಿದನು. [ಮಿಕ್ಕಿದ್ದು ಮುಂದಿನ ಸಂಚಿಕೆಯಲ್ಲಿ]

ವುಡ್‌ಲ್ಯಾಂಡ್ಸ್ ಜನಪ್ರಿಯ 2 ನೇ ವಾರ

ದೇವಾನಂದ್ — ಕಲ್ಪನಾ ಕಾರ್ತಿಕ್ — ಶಶಿಕಲಾ ಪಾತ್ರವಹಿಸಿರುವ

ನೌದೊಗ್ಗಾರ = Nau Do Gyara

ಅತ್ಯಮೋಘ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ಅಪೆರಾ ಯಶಸ್ವಿ 5 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಜೀಲಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಉಮಾ ಟಾಕೀಸ್ 19-1-58 ರಿಂದ

ಕೋಟೀಶ್ವರನ್ (ತಮಿಳು) [ದಿನ 3 ಆಟಗಳು]

ಪಾತ್ರ— ಶಿವಾಜಿ ಗಣೇಶ್, ಪದ್ಮಿನಿ ರಾಗಿಣಿ, ತಂಗವೇಲು, ಶ್ರೀ ರಾಂ

ಬೆಳಿಗಿನ ಪ್ರದರ್ಶನ 10-30 ಕ್ಕೆ — ತಾ || 24 ರಿಂದ 3 ದಿವಸಗಳು ಮಾತ್ರ

SIREN OF BAGDAD (Technicolor Picture)

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಹಂಗೆರಿಯ ವಿಷಯದಲ್ಲಿ ವಿಶ್ವಸಂಸ್ಥೆ ವಂದಿಸಿರುವ ಬೆಂಬಲದ ಚಿತ್ರ

Edited, Printed& Published by Dharma Prachara Nirata M S Krishna Rao, at the Satyavadi Press Chamrajapuram Mysore